ದಿಃ 30-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ.ಎನ್.ಆರ್.ಡಿ ಪ್ರತಿವಾದಿ ಪರ ವಕೀಲರಿಂದಃ</u>

<u>(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಶ್ರೀ ಎನ್.ಎನ್ ವಕೀಲರನ್ನು ತೆಲಗುವಿನಿಂದ ಕನ್ನಡಕ್ಕೆ ಸಾಕ್ಷಿಯ ಉತ್ತರಗಳನ್ನು ಅನುವಾದನೆ ಮಾಡಲು ನೇಮಿಸಲಾಯಿತು)</u>

ನಾನು ಆಂಧ್ರದಲ್ಲಿ ವಾಸವಿದ್ದೇನೆ. ಸಾಕ್ಷಿಯು ಮುಂದುವರೆದು ನನ್ನ ಸಂಸಾರವು ಆಂಧ್ರದಲ್ಲಿದ್ದು ನಾನು ಕೂಲಿ ಕೆಲಸವನ್ನು ಕರ್ನಾಟಕದಲ್ಲಿ ಮಾಡುತ್ತಿದ್ದೇನೆ. ನಾನು ಗೊಟ್ಲಗುಂಟೆಯಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಾನು ಕೂಲಿ ಕೆಲಸದೊಂದಿಗೆ ಕಟ್ಟಿಗೆಗಳನ್ನು ಸಂಗ್ರಹಿಸಿ ಸುಟ್ಟು ಇದ್ದಲು ತಯಾರಿಸುತ್ತೇನೆ. ನಾನು 5 ವರ್ಷದಿಂದ ಕರ್ನಾಟಕದಲ್ಲಿದ್ದೇನೆ. ಪ್ರತಿವಾದಿಯು ನಮ್ಮ ಜಾಗದ 2 ½ ಅಡಿ ಒಳಗೆ ಬಂದಿದ್ದಾರೆ ಎಂದು ಈ ದಾವೆಯನ್ನು ಹೂಡಿದ್ದೇನೆ. ಸದರಿ 2 ½ ಅಡಿಯ ಅರ್ಧ ಭಾಗದಲ್ಲಿ ಈಗಾಗಲೇ ಪಾಯವನ್ನು ಹಾಕಿದ್ದಾರೆ ಹಾಗೂ ಉಳಿದ ಅರ್ಧ ಭಾಗದಲ್ಲಿ ಪಾಯ ಹಾಕಲು ತಯಾರಿದ್ದಾರೆ. ಸದರಿ ಉಳಿದ ಅರ್ಧ ಭಾಗವು ಪ್ರತಿವಾದಿಗೆ ಸೇರಿದ ಜಾಗವಾಗಿರುತ್ತದೆ.

ಪ್ರತಿವಾದಿಯ ಜಾಗದ ವಿಸ್ತೀರ್ಣ 2 ½ ಗುಂಟೆ. ದಾವಾ ಆಸ್ತಿಯನ್ನು ದಿನಾಂಕ 09.01.2024 ರಂದು ನಾನು ಖರೀದಿಸಿದೆನು. ದಾವಾ ಆಸ್ತಿಯನ್ನು ನಾನು ಗಂಗರತ್ನಮ್ಮ ಮತ್ತು ಗಂಗಣ್ಣನಿಂದ ಖರೀದಿಸಿದೆನು. ಗಂಗರತ್ನಮ್ಮ ಹಾಗೂ ನರಸಮ್ಮರವರು ಅವರ ಆಸ್ತಿಯನ್ನು ವಿಭಾಗ ಮಾಡಿಕೊಂಡಾಗ ಗಂಗರತ್ನಮ್ಮರವರಿಗೆ ಬಂದ ಆಸ್ತಿಯ ಭಾಗವನ್ನು ನಾನು ಖರೀದಿಸಿದ್ದೇನೆ ಎಂದರೆ ಸರಿ. ಸದರಿ ವಿಭಾಗವನ್ನು ಅವರು ಯಾವಾಗ ಮಾಡಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸದರಿ ವಿಭಾಗವನ್ನು ಅವರು 4 ವರ್ಷಗಳ ಹಿಂದೆ ಮಾಡಿಕೊಂಡರು ಎಂದರೆ ಗೊತ್ತಿಲ್ಲ.

ಸದರಿ ವಿಭಾಗದಲ್ಲಿ ನರಸಮ್ಮರವರಿಗೆ ಹೆಚ್ಚಿನ ಜಾಗವನ್ನು ನೀಡಲಾಗಿದ್ದು ಗಂಗರತ್ನಮ್ಮರವರಿಗೆ ಕಡಿಮೆ ಜಾಗ ಉಳಿದುಕೊಂಡಿರುತ್ತದೆ ಎಂದರೆ ಸಾಕ್ಷಿ ಅವರಿಬ್ಬರೂ ಸಮಾನವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅವರಿಬ್ಬರ ಮಧ್ಯೆ ನಡೆದ ವಿಭಾಗದ ವಿಭಾಗಗಳು ನನಗೆ ಗೊತ್ತಿಲ್ಲದ ಕಾರಣ ಅವರಿಬ್ಬರು ಎಷ್ಟು ವಿಸ್ತೀರ್ಣದ ಆಸ್ತಿಗಳನ್ನು ಪಡೆದುಕೊಂಡರು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗಕ್ಕೆ ಸಂಬಂಧಪಟ್ಟ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-10 ರ ಪ್ರಕಾರ ವಿಭಾಗದಲ್ಲಿ ಗಂಗರತ್ನಮ್ಮರವರಿಗೆ 6.80 ಹಾಗೂ ನರಸಮ್ಮರವರಿಗೆ 7 ಎಂದು ನಮೂದು ಇದೆ ಎಂದರೆ ಸಾಕ್ಷಿ ಸದರಿ ವಿಚಾರವಾಗಿ ನಾವು ಚಿಕ್ಕಬಳ್ಳಾಪುರಕ್ಕೆ ಹೋಗಿ ವಿಚಾರಿಸಿದಾಗ ವ್ಯತ್ಯಾಸಗಳನ್ನು

ಬದಲಾಯಿಸಿಕೊಳ್ಳಬಹುದೆಂದು ತಾಲ್ಲೂಕು ಕಛೇರಿಯ ಅಧಿಕಾರಿಗಳು ನಮಗೆ ತಿಳಿಸಿದರು ಎಂದು ನುಡಿಯುತ್ತಾರೆ. ನಿಪಿ-10ರ ಪ್ರಕಾರ 2 ½ ಗುಂಟೆ ಜಮೀನು ಇರುವುದಿಲ್ಲ ಹಾಗೂ ಅದಕ್ಕಿಂತ ಕಡಿಮೆ ಇರುತ್ತದೆ ಎಂದರೆ ಸರಿಯಲ್ಲ.

ಶಿವಮ್ಮ ಎಂಬುವವರು ನನಗೆ ಪರಿಚಯವಿದ್ದಾರೆ. ಸದರಿ ಶಿವಮ್ಮರವರು ನನ್ನ ಸಂಬಂಧಿಕರು. ಸದರಿ ಶಿವಮ್ಮರವರು ರಾಮಲಕ್ಷ್ಮೀ ರವರ ವಿರುದ್ಧ ದಾವೆಯನ್ನು ಹೂಡಿರುವ ವಿಚಾರ ನನಗೆ ಗೊತ್ತಿದೆ. ರಾಮಲಕ್ಷ್ಮೀರವರು ಶಿವಮ್ಮರವರ ಜಾಗದಲ್ಲಿ ಒತ್ತುವರಿ ಮಾಡಿರುವ ಕಾರಣ ಅವರು ಆ ದಾವೆಯನ್ನು ಹೂಡಿದ್ದಾರೆ. ಶಿವಮ್ಮರವರು ದಾವೆಯನ್ನು ಹೂಡುವ ಸಮಯದಲ್ಲಿ ರಾಮಲಕ್ಷ್ಮೀರವರು ಪಾಯವನ್ನು ಹಾಕಿಕೊಂಡಿದ್ದರು ಎಂದರೆ ಸಾಕ್ಷಿ ಶಿವಮ್ಮರವರಿಗೆ ತಿಳಿಸದೆ ಪಾಯವನ್ನು ಹಾಕಿಕೊಂಡರು ಎಂದು ನುಡಿಯುತ್ತಾರೆ. ರಾಮಲಕ್ಷ್ಮೀರವರಿಗೆ ವಿಭಾಗದ ಮೂಲಕ 2 ½ ಗುಂಟೆ ಹಾಗೂ ಸುಜಾತರವರಿಗೆ ವಿಭಾಗದ ಮೂಲಕ 3 ಗುಂಟೆ ಸೇರಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ 2 ½ ಗುಂಟೆ ಬಂದ ನಂತರ ರಾಮಲಕ್ಷ್ಮೀ ಅವರು ಪಾಯವನ್ನು ಹಾಕಿದ್ದಾರೆ ಎಂದರೆ ಸಾಕ್ಷಿ ಸರ್ವೆ ಮಾಡಿಸದೆ ಪಾಯವನ್ನು ಹಾಕಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಸರ್ವೆ ಮಾಡಿಸಿ ನಂತರ ಪಾಯವನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ಸುಜಾತರವರಿಗೆ ಬಂದ ಆಸ್ತಿಯನ್ನು ಅವರು ಶಿವಮ್ಮರವರಿಗೆ ಮಾರಾಟ ಮಾಡಿದರು ಎಂದರೆ ಸರಿ. <u>(ಈ ಹಂತದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆಗಳನ್ನು ಕೇಳಬೇಕಾಗಿದೆ ಎಂದು ವಾದಿ ಪರ ವಕೀಲರು ತಕರಾರನ್ನು ಎತ್ತಿದ್ದು ಶಿವಮ್ಮರವರ ಆಸ್ತಿಯು ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಇರುವ ಕಾರಣ ಶಿವಮ್ಮರವರ ಆಸ್ತಿಗೆ ಸಂಬಂಧಪಟ್ಟಂತೆ ಪ್ರಶ್ನೆ ಮತ್ತು ಉತ್ತರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟಂತೆ ನ್ಯಾಯಾಲಯವು ರೆಕಾರ್ಡ್ ಮಾಡಿರುತ್ತದೆ.)</u> ಶಿಮಮ್ಮರವರು ಸದರಿ ಆಸ್ತಿಯನ್ನು ಖರೀದಿಸಿದ ನಂತರವೇ ರಾಮಲಕ್ಷ್ಮೀರವರ ವಿರುದ್ಧ ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿ ರಾಮಲಕ್ಷ್ಮೀರವರು ಪಾಯವನ್ನು ಹಾಕಿದಾಗ ಶಿವಮ್ಮರವರು ದಾವೆಯನ್ನು ಹೂಡಿದರು ಎಂದು ನುಡಿಯುತ್ತಾರೆ. ಶಿವಮ್ಮರವರು ಯಾವಾಗ ಆಸ್ತಿಯನ್ನು ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಪಾಯ ಹಾಕಿ ಒಂದು ವರ್ಷ ಕಳೆದ ನಂತರ ಸುಜಾತರವರಿಂದ ಶಿವಮ್ಮರವರು ಆಸ್ತಿಯನ್ನು ಖರೀದಿಸಿದರು ಎಂದರೆ ಸರಿಯಲ್ಲ. ಶಿವಮ್ಮರವರು ಆಸ್ತಿಯನ್ನು ಖರೀದಿಸಿದ ವಿಚಾರ ನನಗೆ ಗೊತ್ತಿಲ್ಲದ ಕಾರಣ ಪ್ರತಿವಾದಿಯು ಯಾವಾಗ ಪಾಯ ಹಾಕಿದರು ಎಂಬುದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಯು ಶಿವಮ್ಮರವರ ಜಾಗದಲಿಲ ಪಾಯವನ್ನು ಹಾಕಿದ ವಿಚಾರವನ್ನು ಯಾರೋ ಮಾತನಾಡುತ್ತಿದ್ದಾಗ ನನ್ನ ಗಮನಕ್ಕೆ ಬಂತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸುಜಾತ ಮತ್ತು ರಾಮಲಕ್ಷ್ಮೀರವರು

ವಿಭಾಗ ಮಾಡಿಕೊಂಡಾಗ ಪಾಯ ಇರಲಿಲ್ಲ, ಖಾಲಿ ಜಾಗವಾಗಿತ್ತು ಎಂದು ನುಡಿಯುತ್ತಾರೆ. ವಿಭಾಗವಾದ ನಂತರವೇ ಪ್ರತಿವಾದಿಯು ಪಾಯವನ್ನು ಹಾಕಿದ್ದಾರೆ ಎಂದರೆ ಸರಿ.

ಶಿವಮ್ಮರವರಿಗಿಂತ ಮುಂಚೆಯೇ ಸುಜಾತರವರಿಗೆ ಆಸ್ತಿಯು ಬಂದಿದೆ ಎಂದರೆ ಸರಿಯಲ್ಲ. ಶಿವಮ್ಮ ಹಾಗೂ ರಾಮಲಕ್ಷ್ಮೀರವರ ಮಧ್ಯೆ ದಾವೆ ನಡೆಯುತ್ತಿದ್ದಾಗ ನಾನು ಈ ದಾವಾ ಆಸ್ತಿಯನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಶಿವಮ್ಮ ಹಾಗೂ ರಾಮಲಕ್ಷ್ಮೀರವರ ಮಧ್ಯೆ ನಡೆಯುತ್ತಿರುವ ದಾವೆಯ ವಿಚಾರಗಳು ನನಗೆ ಗೊತ್ತಿದೆ. ಸದರಿ ದಾವೆಯನ್ನು ಶಿವಮ್ಮರವರು ಯಾವ ದಿನಾಂಕದಂದು ಹೂಡಿದರು ಎಂಬುದು ನನಗೆ ಗೊತ್ತಿಲ್ಲ. ಶಿವಮ್ಮರವರು ರಾಮಲಕ್ಷ್ಮೀರವರ ವಿರುದ್ಧ ದಾವೆಯನ್ನು ಹೂಡಿದ ನಂತರ ಆ ದಾವೆಗೆ ಸಂಬಂಧಪಟ್ಟಂತೆ ತಾಲ್ಲೂಕು ಭೂ ಮಾಪಕರು ಅಳತೆ ಮಾಡಲು ಬಂದಿದ್ದರು ಎಂದರೆ ಸರಿಯಲ್ಲ. ಭೂ ಮಾಪಕರು ಅಳತೆ ಮಾಡಲು ಬಂದ ವಿಚಾರ ನನಗೆ ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸುವಾಗ ಅದರ ಅಳತೆಯನ್ನು ಮಾಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಅಳತೆಯನ್ನು ಮಾಡಿಸಿದೆವು ಆದರೆ ಅದರ ದಾಖಲೆಯನ್ನು ನಮಗೆ ನೀಡಿರುವುದಿಲ್ಲಾ ಎಂದು ನುಡಿಯುತ್ತಾರೆ. ಅಳತೆ ಮಾಡಿ ವರದಿಯನ್ನು ಸಲ್ಲಿಸಿದರೆ ಮಾತ್ರ ದಾವಾ ಆಸ್ತಿಯ ವಿಸ್ತೀರ್ಣ ಎಷ್ಟಿದೆ ಎಂಬ ಸತ್ಯಾಸಂಗತಿ ತಿಳಿಯುತ್ತದೆ ಎಂದರೆ ಸಾಕ್ಷಿ ನಾವು ಮಾಡಿಸಿದ ಅಳತೆ ಕಾರ್ಯದ ದಾಖಲೆಯನ್ನು ನಮಗೆ ಇನ್ನೂ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಅಳತೆ ಕಾರ್ಯದ ದಾಖಲೆ ನನಗೆ ನೀಡದ ಕಾರಣ ದಾವಾ ಆಸ್ತಿಯ ವಿಸ್ತೀರ್ಣ ಎಷ್ಟು ಇದೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಶಿವಮ್ಮರವರ ಆಸ್ತಿಯ ಅಳತೆಯಾದಾಗ ವಿಸ್ತೀರ್ಣ ಎಷ್ಟಿದೆ ಎಂದು ತಿಳಿಯಿತು ಎಂದು ನುಡಿಯುತ್ತಾರೆ. ಶಿವಮ್ಮರವರು ಅಳತೆ ಮಾಡಿಸಿದಾಗ ನಾನು ದಾವಾ ಆಸ್ತಿಯನ್ನು ಖರೀದಿಸಿರಲಿಲ್ಲ ಎಂದರೆ ಸರಿ.

ದಾವಾ ಆಸ್ತಿಯನ್ನು ಖರೀದಿಸಿದ ನಂತರ ಅದರ ಅಳತೆಯನ್ನು ಮಾಡಿಸಿದ್ದೇನೆ ಆದರೆ ಅದರ ದಾಖಲೆಯನ್ನು ನನಗೆ ನೀಡಿರುವುದಿಲ್ಲ. ಶಿವಮ್ಮರವರು ಮಾಡಿಸಿದ ಅಳತೆಯ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಶಿವಮ್ಮರವರು ಮಾಡಿಸಿದ ಅಳತೆಯಲ್ಲಿ ಅವರ 2 ½ ಅಡಿ ಒತ್ತುವರಿಯಾಗಿದೆ ಎಂದು ವರದಿ ಬಂದಿರುತ್ತದೆ. ಶಿವಮ್ಮರವರು ಅಳತೆ ಮಾಡಿಸಿದಾಗ ನಾನು ಹಾಜರಿರಲಿಲ್ಲ. ಸದರಿ ಅಳತೆಯ ವರದಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸದರಿ ಅಳತೆಯನ್ನು ಮಾಡಿದಾಗ ಯಾವುದೇ ಒತ್ತುವರಿ ಆಗಿಲ್ಲವೆಂದು ಅಳತೆ ಮಾಡಲು ಬಂದವರು ಹೇಳಿದರು ಎಂದರೆ ಸರಿಯಲ್ಲ. ಸದರಿ ಅಳತೆಯ ಸಂದರ್ಭದಲ್ಲಿ ನನ್ನ ಸಂಬಂಧಿಕರು ಹಾಜರಿದ್ದರು. ಸದರಿ ಅಳತೆಯ ಸಮಯದಲ್ಲಿ ಈ ದಾವೆಯ ಆಸ್ತಿಯನ್ನು ಒತ್ತುವರಿ ಮಾಡಿಲ್ಲವೆಂದು ಅಳತೆ ಮಾಡಿದವರು ಹೇಳಿದರು ಎಂದರೆ ಸರಿಯಲ್ಲ. ಸದರಿ ಅಳತೆಯ ದಾಖಲೆಯನ್ನು ನಾನು

ನೋಡಿದ್ದೇನೆ. ಸದರಿ ಅಳತೆಯ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾವು ಮಾಡಿಸಿದ ಅಳತೆಯ ದಾಖಲೆಯನ್ನು ಹಾಜರುಪಡಿಸಿಲ್ಲ ಆದರೆ ಶಿವಮ್ಮರವರು ಮಾಡಿಸಿದ ಅಳತೆಯ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಯು ನಿಪಿ-1 ರಿಂದ 10 ರ ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಅದರಲ್ಲಿ ಶಿವಮ್ಮರವರು ಮಾಡಿಸಿದ ಅಳತೆಯ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ಶಿವಮ್ಮರವರು ಮಾಡಿಸಿದ ಅಳತೆಗೆ ಸಂಬಂಧಪಟ್ಟ ದಾಖಲೆಯನ್ನು ತಾಲ್ಲೂಕು ಕಛೇರಿಯಿಂದ ಯಾವ ದಿನಾಂಕದಂದು ನೀಡಲಾಯಿತು ಎಂಬುದು ನನಗೆ ಗೊತ್ತಿಲ್ಲ. ಸದರಿ ಅಳತೆ ಕಾರ್ಯ ನಡೆದ ನಂತರ ನಾನು ದಾವಾ ಆಸ್ತಿಯನ್ನು ಖರೀದಿಸಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸಾಮಾನ್ಯವಾಗಿ ಒಂದು ಆಸ್ತಿಯನ್ನು ಖರೀದಿಸುವ ಮುನ್ನ ಅದರ ದಾಖಲೆಗಳನ್ನು ಪರಿಶೀಲಿಸಲೇಬೇಕು ಎಂದರೆ ಸಾಕ್ಷಿ ದಾವಾ ಆಸ್ತಿಯ ದಾಖಲೆಗಳು ಸರಿಯಾಗಿದೆ ಎಂದು ರಾಮಲಕ್ಷ್ಮೀರವರು ನನಗೆ ಹೇಳಿದ ಕಾರಣ ನಾನು ದಾವಾ ಆಸ್ತಿಯನ್ನು ಖರೀದಿಸಿದೆನು ಎಂದು ನುಡಿಯುತ್ತಾರೆ. ಪ್ರತಿವಾದಿಯನ್ನು ಹೊರತುಪಡಿಸಿ ಇತರೆ ಯಾರೂ ದಾವಾ ಆಸ್ತಿಯ ದಾಖಲೆಗಳು ಸರಿಯಾಗಿದೆ ಎಂದು ನನಗೆ ತಿಳಿಸಿರುವುದಿಲ್ಲ. ದಾವಾ ಆಸ್ತಿಯ ದಾಖಲೆಗಳು ಸರಿಯಾಗಿದೆ ಎಂದು ಪತ್ರಬರಹಗಾರರು ನನಗೆ ತಿಳಿಸಿದರು.

ದಾವಾ ಆಸ್ತಿಯನ್ನು ಖರೀದಿಸುವಾಗ ಖರೀದಿಪತ್ರಕ್ಕೆ ಸಹಿ ಮಾಡಿದ ಸಾಕ್ಷಿಗಳು ದಾವಾ ಆಸ್ತಿಯ ದಾಖಲೆಗಳು ಸರಿಯಾಗಿವೆ ಎಂದು ನನಗೆ ತಿಳಿಸಿದರು. ದಾವಾ ಆಸ್ತಿಯ ದಾಖಲೆಗಳು ಸರಿಯಾಗಿರುವ ಕಾರಣ ಪ್ರತಿವಾದಿಯ ಜಾಗದಲ್ಲಿ ಪ್ರತಿವಾದಿಯು ಇದ್ದಾರೆ ಹಾಗೂ ನಾನು ಖರೀದಿಸಿದ ಜಾಗದಲ್ಲಿ ನಾನು ಇದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ನನ್ನ ಜಾಗದಲ್ಲಿ 2 ½ ಅಡಿ ಒತ್ತುವರಿ ಮಾಡಿದ್ದಾರೆ ಎಂದು ಸರ್ವೆಯರ್ ರವರೇ ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಒತ್ತುವರಿಯ ವಿಚಾರವನ್ನು ಸರ್ವೆಯರ್ ರವರು ನನಗೆ ತಿಳಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು ತಾಲ್ಲೂಕು ಕಛೇರಿಗೆ ಹೋಗಿ ವಿಚಾರಿಸಿದಾಗ ಸದರಿ ವಿಚಾರವನ್ನು ನನಗೆ ತಿಳಿಸಿದರು ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ದಾಖಲೆಗಳು ಸರಿಯಾಗಿದೆ ಎಂದು ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಿದ ಗಂಗರತ್ನಮ್ಮರವರೂ ಸಹ ನನಗೆ ತಿಳಿಸಿದರು. ನಾನು ಖರೀದಿಸಿದ ಆಸ್ತಿಯಲ್ಲಿ ಯಾರೂ ಸಹ ಯಾವುದೇ ರೀತಿಯಲ್ಲಿ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನಿಪಿ-10ರ ದಾಖಲೆಯನ್ನು ಪತ್ರಬರಹಗಾರರಿಗೆ ಮತ್ತು ನೋಂದಣಿ ಅಧಿಕಾರಿಗಳಿಗೆ ತೋರಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ದಾಖಲೆಗಳು ಸರಿಯಾಗಿದೆ ಎಂದು ದಾವಾ ಆಸ್ತಿಯ ಪಕ್ಕದಲ್ಲಿರುವ ರಾಮು ಎಂಬುವವರು ಹೇಳಿದರು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಬಂಡವಾಳವನ್ನು ಹೂಡಿ ಆಸ್ತಿಯನ್ನು ಖರೀದಿಸುವಾಗ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನೆಲ್ಲವನ್ನೂ ಪರಿಶೀಲಿಸುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲು ಒಂದು ಸೈಟ್ ಖರೀದಿಯಾಗಿದ್ದು ಅದರ ದಾಖಲೆಗಳು ಎಲ್ಲಾ ಸರಿಯಾಗಿದೆ ಎಂದು ತಿಳಿದ ಕಾರಣ ದಾವಾ ಆಸ್ತಿಯ ದಾಖಲೆಗಳು ಸರಿಯಾಗಿರಬಹುದು ಎಂಬ ನಂಬಿಕೆಯ ಮೇಲೆ ದಾವಾ ಆಸ್ತಿಯನ್ನು ಖರೀದಿಸಿದೆನು ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವಾಗ ನಿಪಿ-10ರ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿಸಿದ ಸಮಯದಲ್ಲಿ ನಿಪಿ-10ರ ದಾಖಲೆಯು ಅಸ್ತಿತ್ವದಲ್ಲಿತ್ತು ಎಂದರೆ ಸಾಕ್ಷಿ ನಾನು ಅದನ್ನು ನೋಡಿಲ್ಲ, ನೋಡಿದ್ದರೆ ನಾನು ದಾವಾ ಆಸ್ತಿಯನ್ನು ಖರೀದಿ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-10ರ ಪ್ರಕಾರ ವಿಭಾಗದ ಮೂಲಕ ಗಂಗರತ್ನಮ್ಮರವರಿಗೆ 2 ½ ಕ್ಕಿಂತ ಕಡಿಮೆ ಜಾಗ ಬಂದಿರುವ ವಿಚಾರವನ್ನು ಬೇರೆಯವರು ನನಗೆ ತಿಳಿಸಿದ್ದರೂ ಸಹ ಶಿವಮ್ಮನ ಮಾತನು ಕೇಳಿಕೊಂಡು ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ದಾವೆಯ ವಾದ ಪತ್ರದಲ್ಲಿ ದಾವಾ ಆಸ್ತಿಯು ಒತ್ತುವರಿಯಾಗಿದೆ ಎಂದು ಎಲ್ಲೂ ಸಹ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒತ್ತುವರಿಯಾಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಒತ್ತುವರಿಯಾಗಿದೆ ಎಂದು ನಾನು ಹಾಜರುಪಡಿಸಿರುವ ನಿಪಿ-1ರಿಂದ 10ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಿವಮ್ಮರವರು ಮಾಡಿಸಿರುವ ದಾಖಲೆಯಲ್ಲಿ ದಾವಾ ಆಸ್ತಿಯು ಒತ್ತುವರಿಯಾಗಿರುವ ಬಗ್ಗೆ ನಮೂದು ಇದೆ ಎಂದು ನುಡಿಯುತ್ತಾರೆ. ಶಿವಮ್ಮರವರ ದಾಖಲೆಯನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಯಲ್ಲಿ ದಾವಾ ಆಸ್ತಿಯ ಒತ್ತುವರಿ ಬಗ್ಗೆ ನಮೂದು ಇಲ್ಲದಿರುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ.

ನಿಪಿ-5ರಲ್ಲಿ ರಾಮಲಕ್ಷ್ಮಮ್ಮರವರು ಒತ್ತುವರಿ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಶಿವಮ್ಮರವರ ದಾಖಲೆಯಲ್ಲಿ ಸದರಿ ವಿಚಾರದ ನಮೂದು ಇದೆ ಎಂದರೆ ಸರಿ. ಸರ್ವೆ ಕಾರ್ಯ ಮಾಡಿಸಿ ದಾಖಲೆಗಳು ರಾಮಲಕ್ಷ್ಮಮ್ಮರವರ ಹೆಸರಿಗೆ ಬಂದ ನಂತರವೇ ಅವರು ಅವರ ಆಸ್ತಿಯಲ್ಲಿ ಮನೆಯನ್ನು ಕಟ್ಟಿಸಲು ಪಾಯವನ್ನು

ಹಾಕಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಆಸ್ತಿಯಲ್ಲಿಯೇ ಪಾಯವನ್ನು ಹಾಕಿ ಮನೆ ಕಟ್ಟಿಸುತ್ತಿದ್ದಾರೆ ಹೊರತು ದಾವಾ ಆಸ್ತಿಯಲ್ಲಿ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯಾರನ್ನೂ ಕೇಳದೆ ಪ್ರತಿವಾದಿಯು ಪಾಯವನ್ನು ಹಾಕಿದ್ದಾರೆ ಎಂದು ನುಡಿಯುತ್ತಾರೆ.

ಶಿವಮ್ಮರವರು ರಾಮಲಕ್ಷ್ಮಮ್ಮರವರ ವಿರುದ್ಧ ಹೂಡಿದ್ದ ದಾವೆಯಲ್ಲಿ ಮಧ್ಯಂತರ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಮಧ್ಯಂತರ ತಡೆಯಾಜ್ಞೆ ಏನೆಂದು ನೀಡಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನೀಡಿದ ಮಧ್ಯಂತರ ತಡೆಯಾಜ್ಞೆಯನ್ನು ನ್ಯಾಯಾಲಯವು ವಜಾಗೊಳಿಸಿದ ನಂತರ ಪ್ರತಿವಾದಿಯು ಮನೆಯನ್ನು ಕಟ್ಟಲು ಮುಂದಾದರು ಎಂದರೆ ಸಾಕ್ಷಿ ನನ್ನ ಜಾಗದಲ್ಲಿ ಒತ್ತುವರಿಯಾಗಿದೆ ಎಂದು ಮಧ್ಯಂತರ ತಡೆಯಾಜ್ಞೆಯನ್ನು ನ್ಯಾಯಾಲಯವು ವಜಾಗೊಳಿಸಿದ ಕಾರಣ ನಾನು ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಮಧ್ಯಂತರ ತಡೆಯಾಜ್ಞೆಯನ್ನು ನ್ಯಾಯಾಲಯವು ವಜಾಗೊಳಿಸಿದ ನಂತರ ಪ್ರತಿವಾದಿಯು ತನ್ನ ಜಾಗದಲ್ಲಿ ಮನೆಯನ್ನು ಕಟ್ಟಲು ಪ್ರಾರಂಭಿಸಿದರು ಎಂದರೆ ಸಾಕ್ಷಿ ದಾವಾ ಆಸ್ತಿಯ ಜಾಗವನ್ನು ತೋರಿಸಿ ಅದನ್ನು ಹೊರತುಪಡಿಸಿ ಪ್ರತಿವಾದಿಯು ತನ್ನ ಜಾಗದಲ್ಲಿ ಕಟ್ಟಿಕೊಳ್ಳಬಹುದು ಎಂದು ನಾನು ಪ್ರತಿವಾದಿಗೆ ಹೇಳಿದೆನು ಎಂದು ನುಡಿಯುತ್ತಾರೆ. ಪ್ರತಿವಾದಿಯನ್ನು ಮನೆ ಕಟ್ಟುವುದರಿಂದ ತಡೆಯಲು ನಾನು ಮತ್ತು ನನ್ನ ಗಂಡ ಹೋಗಿದ್ದೆವು, ಆಗ ಶಿವಮ್ಮರವರೂ ಸಹ ಬಂದರು ಹಾಗೂ ನಮ್ಮ ಜಾಗವನ್ನು ತೋರಿಸಿ ಅವರ ಜಾಗದಲ್ಲಿ ಮನೆಯನ್ನು ಕಟ್ಟಿಕೊಳ್ಳಬಹುದು ಎಂದು ನಾವು ಪ್ರತಿವಾದಿಗೆ ತಿಳಿಸಿದೆವು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಶಿವಮ್ಮರವರು ಆಕೆಯ 3 ಗುಂಟೆ ಜಾಗವನ್ನು ತೋರಿಸಿ ಪ್ರತಿವಾದಿಯ ಜಾಗದಲ್ಲಿ ಪ್ರತಿವಾದಿಯು ಮನೆಯನ್ನು ಕಟ್ಟಿಕೊಳ್ಳಬಹುದು ಎಂದು ಹೇಳಿದರು ಎಂದು ನುಡಿಯುತ್ತಾರೆ.

ಶಿವಮ್ಮರವರು ಹೂಡಿರುವ ದಾವೆಯಲ್ಲಿ ಅಳತೆ ಮಾಡಿದಾಗ ಒತ್ತುವರಿಯಾದ ವಿಚಾರ ನನಗೆ ತಿಳಿದಿದ್ದರೂ ಪ್ರತಿವಾದಿಗೆ ಮನೆ ಕಟ್ಟಲು ತೊಂದರೆಯಾಗಬಾರದೆಂದು ನಾನು ದಾವಾ ಆಸ್ತಿಯನ್ನು ಖರೀದಿಸಿದೆನು ಎಂದರೆ ಸರಿಯಲ್ಲ. ಮನೆಯನ್ನು ಕಟ್ಟುವುದರಿಂದ ಪ್ರತಿವಾದಿಯನ್ನು ತಡೆಯಲು ಸಾಧ್ಯವಿಲ್ಲವೆಂದು ತಿಳಿದಾಗ ಶಿವಮ್ಮರವರು ಬಂದು ನನ್ನೊಂದಿಗೆ ರಾಜಿ ಮಾಡಿಕೊಂಡು ಪ್ರತಿವಾದಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಶಿವಮ್ಮರವರು ಹೂಡಿದ ದಾವೆಯಲ್ಲಿ ಸರ್ವೆಯರ್ ರವರು ಸರ್ವೆ ನಂ.45 ರ ಸಂಪೂರ್ಣ ಜಾಗವನ್ನು ಅಳತೆ ಮಾಡಿದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒತ್ತುವರಿಯಾಗಿದೆ ಎಂದು ಸದರಿ ಅಳತೆಯಿಂದಲೇ ನನಗೆ ತಿಳಿಯಿತು ಎಂದು ನುಡಿಯುತ್ತಾರೆ.

ಸದರಿ ಅಳತೆಯಲ್ಲಿ ಎಲ್ಲರದ್ದೂ 2 ½ ಅಡಿ ಜಾಗ ಒತ್ತುವರಿಯಾಗಿದೆ ಎಂದು ಕಂಡುಬಂದಿತು ಎಂದರೆ ಸಾಕ್ಷಿ ಎಲ್ಲರದ್ದೂ ಒತ್ತುವರಿಯಾಗಿಲ್ಲ, ರಾಮು ರವರ ಆಸ್ತಿಯಿಂದ ಒತ್ತುವರಿ ಪ್ರಾರಂಭವಾಗಿದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಸರ್ವೆ ಮಾಡಿದ ಅಧಿಕಾರಿಯು ನನಗೆ ತಾಲ್ಲೂಕು ಕಛೇರಿಯಲ್ಲಿ ತಿಳಿಸಿದರು. ಎಲ್ಲರ ಜಾಗದಲ್ಲಿ ಒತ್ತುವರಿಯಾದ ಕಾರಣ ಎಲ್ಲರ ಒಪ್ಪಿಗೆಯೊಂದಿಗೆ ಜಿ.ಪಿ.ಆರ್.ಎಸ್ ಸರ್ವೆಯನ್ನು ಕೈಗೊಳ್ಳಲಾಯಿತು ಎಂದರೆ ಗೊತ್ತಿಲ್ಲ. ಸದರಿ ಸರ್ವೆಯಲ್ಲಿ ನಾನೂ ಸಹ ಹಾಜರಿದ್ದೆನು ಎಂದರೆ ಸರಿಯಲ್ಲ. ಯಾರದ್ದೂ ಜಾಗ ಒತ್ತುವರಿಯಾಗಿಲ್ಲವೆಂದು ಸದರಿ ಸರ್ವೆಯಿಂದ ಕಂಡುಬಂದಿತು ಎಂದರೆ ಸರಿಯಲ್ಲ. ಸದರಿ ಸರ್ವೆ ಆಗಿ ಯಾವುದೇ ಜಾಗದಲ್ಲಿ ಒತ್ತುವರಿಯಾಗಿಲ್ಲವೆಂದು ಕಂಡುಬಂದ ನಂತರವೇ ನಾನು ದಾವಾ ಆಸ್ತಿಯನ್ನು ಖರೀದಿಸಿದೆನು ಎಂದರೆ ಸರಿಯಲ್ಲ. ಯಾವುದೇ ಒತ್ತುವರಿಯಾಗಿಲ್ಲವೆಂದು ದಾವಾ ಆಸ್ತಿಯನ್ನು ಖರೀದಿಸಿದ್ದರೂ ಶಿವಮ್ಮರವರಿಗೆ ಸಹಾಯ ಮಾಡಲು ಮತ್ತು ಪ್ರತಿವಾದಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಜಾಗ 2 ½ ಗುಂಟೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಿಸ್ತೀರ್ಣ 2 ½ ಗುಂಟೆ ಇಲ್ಲವೆಂದು ನನಗೆ ತಿಳಿದಿದ್ದರೂ ಪ್ರತಿವಾದಿಯು ತೊಂದರೆ ನೀಡಿದ್ದಾರೆ ಎಂದು ಸುಳ್ಳು ದಾವೆಯನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಮ್ಮರವರ ಜಾಗದಲ್ಲಿ ಯಾವುದೇ ಒತ್ತುವರಿ ಇಲ್ಲವೆಂದು ಸರ್ವೆ ಮೂಲಕ ಕಂಡುಬಂದರೂ ಶಿವಮ್ಮರವರು ತಾಲ್ಲೂಕು ಕಛೇರಿಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಒತ್ತುವರಿಯಾಗಿದೆ ಎಂದು ಸುಳ್ಳು ವರದಿಯನ್ನು ಸೃಷ್ಠಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಶಿವಮ್ಮರವರ ಒತ್ತಾಯದ ಮೇರೆಗೆ ಅವರು ಹೇಳಿದಂತೆ ವರದಿಯನ್ನು ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ. ಶಿವಮ್ಮರವರು ಸೃಷ್ಠಿಮಾಡಿರುವ ವರದಿ ಆಧಾರದ ಮೇಲೆ ನಾನು ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಎಂದಿಗೂ ದಾವಾ ಆಸ್ತಿಗೆ ಬರಲಿಲ್ಲ ಹಾಗೂ ಯಾವುದೇ ರೀತಿಯ ತೊಂದರೆ ಅಥವಾ ಒತ್ತುವರಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ತೊಂದರೆ ನೀಡದಿದ್ದರೂ ಪ್ರತಿವಾದಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನ್ಯಾಯಾಲಯದ ಮೂಲಕ ಅಳತೆ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು